ಹರಿಕಥಾ ಪರಂಪರೆ : ಸಂಗೀತ-ಭಕ್ತಿಗಳ ಸಮಾಗಮ

ದತ್ತಾತ್ರೇಯ ವೇಲಣಕರ್

ಭಾರತದ ವಿವಿಧ ಪ್ರಾಂತ್ಯಗಳಲ್ಲಿ ಧರ್ಮ, ಅಧ್ಯಾತ್ಮ, ಭಕ್ತಿ, ನೀತಿ ಹಾಗೂ ಸಂಸ್ಕೃತಿಯನ್ನು ಜನಸಾಮಾನ್ಯರತ್ತ ಕೊಂಡೊಯ್ಯುವ ಸಮರ್ಥ ಮಾಧ್ಯಮವೇ ಹರಿಕಥೆ. ಸಂಗೀತ, ಸಾಹಿತ್ಯಗಳೆರಡರ ಪರಿಪಕ್ವವಾದ ಸಮ್ಮಿಲನ ಇಲ್ಲಿದೆ. ಲೇಖಕರು ಪ್ರಸಿದ್ಧ ಹಿಂದೂಸ್ತಾನಿ ಸಂಗೀತ ಗಾರರೂ, ಪರಂಪರಾಗತ ಹರಿಕಥೆಯ ಕಲಾವಿದರೂ ಆಗಿದ್ದಾರೆ. ಶ್ರೀರಾಮಕೃಷ್ಣರ, ಹಾಗೂ ಇನ್ನಿತರ ಸಂತರ ಮೇಲೆ ಅವರು ನೀಡಿರುವ ಹರಿಕಥಾ ಕಾರ್ಯಕ್ರಮಗಳು ಅತ್ಯಂತ ಜನಪ್ರಿಯವಾಗಿವೆ. ಸಂಗೀತ ಅಧ್ಯಯನ-ಅಧ್ಯಾಪನಗಳಲ್ಲಿ ಸದಾ ನಿರತರಾಗಿರುವ ಅವರು ಇಂಗ್ಲಿಷಿನಲ್ಲಿ 'Swami Vivekananda's Contribution to Indian Classical Music' ಎಂಬ ಒಂದು ಗ್ರಂಥವನ್ನೂ ರಚಿಸಿದ್ದಾರೆ.

ಚೈತನ್ಯಂ ಸರ್ವಭೂತಾನಾಂ ವಿವೃತಂ ಜಗದಾತ್ಮನಾ ।
ನಾದಬ್ರಹ್ಮತದಾನಂದಮದ್ವಿತೀಯಮುಪಾಸ್ಮಹೇ ॥

(ಸಂಗೀತ ರತ್ನಾಕರ ೧.೩೧)

'ಯಾವುದು ಸರ್ವಭೂತಗಳ ಚೈತನ್ಯವಾಗಿದೆಯೋ ಮತ್ತು ಯಾವುದನ್ನು ಜಗದಾತ್ಮನು ವ್ಯಾಪಿಸಿರುವನೋ ಅಂಥ ಆ ಅದ್ವಿತೀಯ ಆನಂದಮಯ ನಾದಬ್ರಹ್ಮನ ಉಪಾಸನೆ ಮಾಡುತ್ತೇನೆ.'

ಸಂಗೀತದ ಮೂಲಕ ಭಕ್ತಿಸಾಧನೆಯನ್ನು ಶತಮಾನಗಳಿಂದ ಅನೇಕ ಮಂದಿ ಸಾಧು-ಸಂತರು ನಮಗೆ ತೋರಿಸಿಕೊಟ್ಟಿರುವರು. 'ಕಲೌ ಸಂಕೀರ್ತ್ಯ ಕೇಶವಮ್' ಎಂದು ಭಾಗವತ ಸಾರುತ್ತದೆ. ಕಲಿಯುಗದಲ್ಲಿ ಭಗವಂತನ ಸಾಕ್ಷಾತ್ಕಾರಕ್ಕೆ ಭಕ್ತಿಯುಕ್ತ ಸಂಗೀತವು ಬಹಳ ಸುಲಭ ಸರಳ ಉಪಾಯವಾಗಿದೆ. ಸಂಗೀತದಲ್ಲಿ ಭಕ್ತಿಯು ಆವಶ್ಯಕ. ಭಾರತೀಯ ಸಂಗೀತ ಪರಂಪರೆಯಲ್ಲಿ **ಮಾರ್ಗೀ** ಮತ್ತು **ದೇಶೀ** ಎಂಬ ಪ್ರಭೇದಗಳಿದ್ದವು. ಮಾರ್ಗೀ ಆತ್ಮರಂಜನೆ ಗಾಗಿ ಮತ್ತು ದೇಶೀ ಮನೋರಂಜನೆಗಾಗಿ. ಇಂದಿನ ಆಧುನಿಕ ಕಾಲದಲ್ಲೂ ಮಾರ್ಗೀ ಸಂಗೀತದ ಮೂಲಕ ಭಕ್ತಿಯ ಪ್ರಾಕಟ್ಯ ದೊಂದಿಗೆ ಭಗವಂತನ ಅನುಸಂಧಾನ ಮಾಡಿದ ಹಲವು ಮಹಾ ಪುರುಷರನ್ನು ನಾವು ಕಾಣಬಹುದು. ಸ್ವಾಮಿ ವಿವೇಕಾನಂದರು ತಮ್ಮ ಇಪ್ಪತ್ತಮೂರನೇ ವಯಸ್ಸಿನಲ್ಲಿಯೇ ಸಂಗೀತದ ಬಗ್ಗೆ ಪ್ರಬಂಧಗಳನ್ನು, ಸಂಗೀತ ರಚನೆಗಳನ್ನು ರಚಿಸಿದ್ದಾರೆ. ಶಾಸ್ತ್ರೀಯ ಸಂಗೀತದ ಬಗ್ಗೆ ಸ್ವಾಮೀಜಿ ಹೇಳುವಾಗ, 'ಸಂಗೀತವು ಭಕ್ತಿ ಪ್ರಧಾನವಾಗಿರಬೇಕು. ಧ್ರುಪದ್ ಗಾಯನದ ಗಾಂಭೀರ್ಯ, ಖಯಾಲ್ ಗಾಯನದ ರಂಜಕತೆ ಮತ್ತು ಚಾಂಚಲ್ಯದ ಜೊತೆಗೆ ಭಕ್ತಿಯ ಸಮಾಗಮವಾದರೆ ಅದು ಅತ್ಯುತ್ತಮ ಸಂಗೀತವಾಗು ತ್ತದೆ' ಎನ್ನುತ್ತಾರೆ.

ಕಥಾಕೀರ್ತನ ಅಥವಾ ಹರಿಕಥಾ ಪರಂಪರೆಯು ಭಕ್ತಿಪ್ರಧಾನ ಸಂಗೀತಯುಕ್ತ ಕಲಾಪ್ರಕಾರವಾಗಿದೆ. ಭಕ್ತಿ ಮತ್ತು ಸಂಗೀತ ಕಥಾ ಕೀರ್ತನೆಯ ಎರಡು ಕಣ್ಣುಗಳಿದ್ದಂತೆ. ಇವೆರಡರ ಅವಿನಾಭಾವ ಸಂಬಂಧದ ತಳಹದಿಯಲ್ಲಿ ಹರಿಕಥೆ ನಿಂತಿದೆ. ಹರಿಕಥೆಯ ಮುಖ್ಯ ಉದ್ದೇಶವೇ ಭಕ್ತಿಪ್ರಚಾರ. ಕೇವಲ ಭಗವಂತನ ಗುಣ ಗಾನವನ್ನು ಮಾಡಿ ಜನಸಾಮಾನ್ಯರಲ್ಲಿ ಭಕ್ತಿಯ ಸಂಚಲನ

ಮಾಡಿಸುವುದು ಅದರ ಚರಮ, ಪರಮ ಧ್ಯೇಯ. ಸಂಗೀತ, ಭಕ್ತಿಯ ಪ್ರಾಕಟ್ಯಕ್ಕೆ; ಭಕ್ತಿ, ಸಂಗೀತದ ಸಫಲತೆಗೆ. ಭಕ್ತಿ ಮತ್ತು ಸಂಗೀತದ ಸಮೀಕರಣವೇ ಹರಿಕಥೆ.

ಕಥಾಕೀರ್ತನವು ಶಾಸ್ತ್ರೀಯ ಸಂಗೀತ, ಜಾನಪದ, ನೃತ್ಯ, ಅಭಿನಯ, ಗಮಕ, ವಕ್ತೃತ್ವ – ಇಂತಹ ಅನೇಕ ಕಲೆಗಳ ಸಮ್ಮಿಶ್ರವಾದ ವಿಶಿಷ್ಟವಾದ ಕಲಾಪ್ರಕಾರವಾಗಿದೆ. ಕಥಾ-ಕೀರ್ತನವು ಹರಿಕಥೆ, ಕಥಾ ಕಾಲಕ್ಷೇಪ, ಕಥಾಪ್ರಸಂಗಂ, ಕೀರ್ತನ, ಸಂಗೀತೋಪಾಖ್ಯಾನ ಎಂಬಿತ್ಯಾದಿ ಹಲವು ಹೆಸರುಗಳಿಂದ ದೇಶದ ನಾನಾ ಭಾಗಗಳಲ್ಲಿ ಜನಜನಿತವಾಗಿದೆ. ಹೆಸರು ಬೇರೆಯಾಗಿದ್ದರೂ ಕಲೆಯ ಮೂಲ ಸ್ವರೂಪ-ಹೇತು ಒಂದೇ ಆಗಿದೆ. ಈ ಹರಿಕಥಾ ಪ್ರಕಾರಕ್ಕೆ ಪ್ರಾಚೀನತೆ ಇದೆ. ಸೋಮೇಶ್ವರನ '**ಮಾನಸೋಲ್ಲಾಸ**' ಎಂಬ ವಿಶ್ವಕೋಶದಲ್ಲಿ ಕಥಾ-ವಿನೋದವೆಂಬ ಪ್ರಕರಣದಲ್ಲಿ ಈ ಕಲೆಯ ಹಳೆಯ ಬೇರುಗಳನ್ನು ಕಾಣಬಹುದು.

ಕಥಾ-ಕೀರ್ತನ ವಿಷಯದ ವ್ಯಾಪ್ತಿ ವಿಸ್ತಾರವಾದುದು. ಹಲವು ಕಲೆಗಳ ಸಮನ್ವಯದ ಕಲಾಪ್ರಕಾರವಾದ ಕಥಾ-ಕೀರ್ತನವು ಜನಪರವಾದ ನಿಲುವನ್ನು ಹೊಂದಿರುವ, ಆಧ್ಯಾತ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ, ಸಾಮಾಜಿಕ ಆಯಾಮಗಳನ್ನು ಹೊಂದಿರುವ, ಜನಮಾನಸವನ್ನು ಸುಲಭವಾಗಿ ಮುಟ್ಟುವ ಕಲಾಸಾಧನವಾಗಿದೆ. ಕಥಾ-ಕೀರ್ತನದಲ್ಲಿ ಪ್ರಸ್ತುತಪಡಿಸುವ ಪಾತ್ರಗಳ ಗುಣ-ಸ್ವಭಾವಗಳಿಗನುಗುಣವಾಗಿ ಧ್ವನಿಯ ಏರಿಳಿತ, ನವರಸಗಳ ಆವಿರ್ಭಾವವನ್ನು ಸಾಹಿತ್ಯ, ಸಂಗೀತ, ಅಭಿನಯಗಳ ಮೂಲಕ ಪ್ರದರ್ಶಿಸುವುದು ಕಥಾ-ಕೀರ್ತನೆಯ ಮೂಲ ಸ್ವರೂಪ. ಅನೇಕ ಕಲೆಗಳನ್ನು ಸಮ್ಮಿಲನಗೊಳಿಸಿ ಒಬ್ಬ ವ್ಯಕ್ತಿಯು ಪ್ರಸ್ತುತಪಡಿಸುವುದು ಕಥಾ-ಕೀರ್ತನ ಕಲೆಯಾಗಿದೆ.

ಶಾಸ್ತ್ರೀಯ ಸಂಗೀತ, ಶಿಷ್ಟ ಸಾಹಿತ್ಯ, ಜಾನಪದ, ನವರಸಗಳ ಪೋಷಣೆ ಮುಂತಾದ ಗುಣವಿಶೇಷಗಳಿಂದ ಅದು ಸಾಮಾನ್ಯ ಪ್ರಜೆಯನ್ನು ಮುಟ್ಟುವಂಥದ್ದು ಮತ್ತು ತಟ್ಟುವಂಥದ್ದು. ಜಗತ್ತಿನ ಪ್ರಚಾರ ಮಾಧ್ಯಮಗಳಲ್ಲಿ ಬಲು ಅಪರೂಪ ಹಾಗೂ ವಿಶಿಷ್ಟವಾದುದು ಕೀರ್ತನ ಕಲೆ. ಧರ್ಮಪ್ರಚಾರ, ಸಂಸ್ಕೃತಿ, ಜ್ಞಾನ, ನೀತಿಬೋಧನೆ, ಜೀವನಾದರ್ಶ, ರಾಷ್ಟ್ರಪ್ರೇಮ ಮೊದಲಾದ ಉನ್ನತ ಮೌಲ್ಯಗಳನ್ನು ತಮ್ಮ ಕಥಾಕೀರ್ತನಗಳ ಮೂಲಕ ಜನರ ಮನಸ್ಸಿಗೆ ತಲುಪಿಸಿದ ಭಾರತೀಯ ಸಂಸ್ಕೃತಿಯ ಹರಿಕಾರರೇ ಕೀರ್ತನಕಾರರು.

ಹರಿಕಥೆಯಲ್ಲಿ ಸಂಗೀತದ ಪಾತ್ರ ಬಹಳ ಮಹತ್ವದ್ದು.

ದೇವದತ್ತಾಮಿಮಾಂ ವೀಣಾಂ ಸ್ವರಬ್ರಹ್ಮವಿಭೂಷಿತಾಮ್ ।
ಮೂರ್ಛಯಿತ್ವಾ ಹರಿಕಥಾಂ ಗಾಯಮಾನಶ್ಚರಾಮ್ಯಹಮ್ ॥

(ಭಾಗವತ- ೧.೬.೩೩)

ನಾರದರು ಹೇಳುತ್ತಾರೆ, ''ಭಗವಂತನು ದಯಪಾಲಿಸಿದ ಸ್ವರ ಬ್ರಹ್ಮಯೋಗದಿಂದ ವಿಭೂಷಿತವಾದ ಈ ವೀಣೆಯನ್ನು ಎತ್ತಿ ಕೊಂಡು ಅದನ್ನು ನುಡಿಸುತ್ತಾ ಅದರ ಜೊತೆಗೆ ಹರಿಕಥೆಯ ಗಾಯನ ಮಾಡುತ್ತಾ ನಾನು ತ್ರಿಲೋಕಗಳಲ್ಲಿ ಭ್ರಮಣ ಮಾಡುತ್ತಿರುತ್ತೇನೆ.''

ಸಂಗೀತವು ಕಥಾ-ಕೀರ್ತನದ ಪ್ರಧಾನ ಅಂಗವಾಗಿದೆ. ನಾದಮಯವಾದ ಸಂಗೀತವು ಭಾವಪ್ರಧಾನವಾದರೆ ವೇದಮಯವಾದ ಸಾಹಿತ್ಯವು ಜ್ಞಾನ ಪ್ರಧಾನವಾದುದು. ಕಥಾ-ಕೀರ್ತನದಲ್ಲಿ ಸಾಹಿತ್ಯವು ಶ್ರುತಿಬದ್ಧವಾಗಿದ್ದು ಸಂಗೀತಮಯವಾಗಿರುತ್ತದೆ. ಇವರ ಮಾತು ಕೂಡ ಶ್ರುತಿಯಲ್ಲೇ ಇರುತ್ತದೆ. ಗಾಂಧಾರ, ಪಂಚಮದಲ್ಲಿ ಮಾತನಾಡುತ್ತಾರೆ. ಭಾವ ಬದಲಾದಂತೆ ಸ್ವರಗಳು ಕೂಡ ಬದಲಾಗುತ್ತವೆ.

ಮಾನವನಿಗೆ ಭಾವವು ಎಷ್ಟು ಶೀಘ್ರವಾಗಿ ಜಾಗೃತವಾಗಿ ಮುಟ್ಟಬಲ್ಲುದೋ, ವಿಚಾರವು ಅಷ್ಟು ಬೇಗ ತಲುಪಲಾರದು. ಭಾವಪ್ರಧಾನವಾದ್ದರಿಂದ ಶ್ರೋತೃಗಳಿಗೆ ನೇರವಾಗಿ ಅದರ ಅನುಭೂತಿ ಉಂಟಾಗುತ್ತದೆ. ಭಾವವು ಬೆಳೆದಾಗ ಮನುಷ್ಯನು ಕೋಮಲನಾಗುತ್ತಾನೆ, ವಿಚಾರ ಹೆಚ್ಚಾದಾಗ ಕಠಿಣನಾಗಿ ತಾರ್ಕಿಕನಾಗುತ್ತಾನೆ. ಹತ್ತು-ಹದಿನೈದು ನಿಮಿಷಗಳಲ್ಲಿ ವಿವರಿಸುವ ಭಾವವನ್ನು ಒಂದು ಹಾಡಿನ ಮೂಲಕ ಸುಲಭವಾಗಿ ಸ್ವಲ್ಪ ಸಮಯದಲ್ಲೇ ಜನರಿಗೆ ಮುಟ್ಟಿಸಬಹುದು. ಜಗತ್ತಿನಲ್ಲಿ ದೇವರು, ಭಕ್ತಿ ಇತ್ಯಾದಿಗಳು ಭಾವಪ್ರಧಾನವಾದ ವಿಷಯಗಳೇ ಆಗಿವೆ.

ಕಥಾಕೀರ್ತನೆಯು ಗೇಯಪ್ರಧಾನವಾದ ಕಲೆ. ಕಥಾಕೀರ್ತನೆಯಲ್ಲಿ ಶಾಸ್ತ್ರೀಯ ಸಂಗೀತ, ಲಘು ಶಾಸ್ತ್ರೀಯ, ಜಾನಪದ ಸಂಗೀತದ ಬಳಕೆಯನ್ನು ಕಾಣಬಹುದಾಗಿದೆ. ಶಾಸ್ತ್ರೀಯ ಸಂಗೀತದಲ್ಲಿ ಪರಿಣತಿ ಪಡೆದ ಕಲಾವಿದರ ಹರಿಕಥಾ ಪ್ರಸ್ತುತಿ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಶ್ರುತಿ ಶುದ್ಧತೆ, ಅನೇಕ ರಾಗಗಳ ಜ್ಞಾನ ಮತ್ತು ಸಂದರ್ಭೋಚಿತ ರಾಗಗಳ ಬಳಕೆ ಇವು ಕಥಾ ಕೀರ್ತನೆಗೆ ಸಹಕಾರಿಯಾಗಿರುತ್ತದೆ. ಕರುಣ, ವೀರ, ಶೃಂಗಾರಾದಿ ನವರಸಗಳ ಆವಿರ್ಭಾವವನ್ನು ಆಯಾಯಾ ರಾಗಗಳ ಮೂಲಕ ಪ್ರಕಟಪಡಿಸುವುದು ಸುಲಭವಾಗುತ್ತದೆ. ದೇವರ ಪ್ರಾರ್ಥನೆ ಮಾಡುವಾಗ ಮತ್ತು ಕರುಣಾರಸ ಪ್ರಧಾನವಾದ ಕಾಲದಲ್ಲಿ ಹಾಡುಗಳು ನಿಧಾನಗತಿ ಇದ್ದರೆ, ಆ ಭಾವಕ್ಕೆ ಹತ್ತಿರವಿರುವ ರಾಗಗಳ ಪ್ರಯೋಗದಿಂದ ಬೇಗನೆ ವಾತಾವರಣ ನಿರ್ಮಾಣ ಮಾಡಬಹುದು. ರಾಗಜ್ಞಾನ ಕಡಿಮೆ ಇರುವ ವ್ಯಕ್ತಿ ಅದೇ ಸಂದರ್ಭಕ್ಕೆ ವೀರರಸ ರಾಗವನ್ನು ಹಾಡಿದರೆ ಆಭಾಸವಾಗುತ್ತದೆ. ಹಾಗೆ ವೀರರಸ ಸಂದರ್ಭದಲ್ಲಿ ವಿಳಂಬವಾಗಿ ಹಾಡಿದರೆ ರಸವು ಕಸವಾಗುವ ಸಾಧ್ಯತೆಗಳೇ ಹೆಚ್ಚು. ನಿಖರವಾದ ಶ್ರುತಿ-ಲಯಗಳ ಜ್ಞಾನವನ್ನು ಶಾಸ್ತ್ರೀಯ ಗಾಯನ ಅಭ್ಯಾಸದ ಮೂಲಕ ಪಡೆಯಬಹುದು. ಕಥಾ-ಕೀರ್ತನದಲ್ಲಿ ರಾಗ ಸಂಯೋಜನೆ ತುಂಬಾ ಸೂಕ್ಷ್ಮವಾದ ಮತ್ತು ಮಹತ್ವದ ವಿಷಯವಾಗಿದೆ. ಸಂಗೀತಶಾಸ್ತ್ರದಲ್ಲಿ ಪ್ರತಿಯೊಂದು ರಾಗದ ಲಕ್ಷಣ, ಪ್ರಕೃತಿ, ಅದರಿಂದ ಹೊರಹೊಮ್ಮುವ ರಸಭಾವಗಳ ವಿಮರ್ಶೆ ಇದೆ. ಈ ಭಾಗವನ್ನು ಕೀರ್ತನಕಾರರು ಚೆನ್ನಾಗಿ ತಿಳಿದಿರಬೇಕು. ಆಗ ರಾಗ ತಾಳಗಳ ಜೋಡಣೆ ಚೆನ್ನಾಗಿರುತ್ತದೆ.

ಕಥಾ ಕೀರ್ತನದ ಪ್ರಮುಖ ಭಾಗ ಸಂಗೀತವಾಗಿದೆ. ಆದರೆ ಕಥಾ-ಕೀರ್ತನ ಶಾಸ್ತ್ರೀಯ ಸಂಗೀತ ಅಥವಾ ಕೇವಲ ಕಾರ್ಯಕ್ರಮವಾಗಬಾರದು. ಸಂಗೀತದ ಪ್ರಮಾಣ ಅತ್ಯಂತ ಮಹತ್ವದ ವಿಷಯವಾಗಿದೆ. ಭಕ್ತಿ ಮತ್ತು ಕಥೆಯ ಹಂದರವನ್ನು ಜಾಗ್ರತೆಯಾಗಿ ಸರಿದೂಗಿಸಿಕೊಂಡು ಹೋಗುವುದು ಕೀರ್ತನಕಾರರ ಜವಾಬ್ದಾರಿಯಾಗಿದೆ. ಭಕ್ತಿ ಮತ್ತು ಸಂಗೀತದ ಸರಿಯಾದ ಮಿಶ್ರಣ ಹರಿಕಥೆಯಲ್ಲಿ ಅತ್ಯಗತ್ಯ. ಭಗವತ್ ಪ್ರೇಮದ ಪ್ರಕಟೀಕರಣ ಕಥಾಕೀರ್ತನದಲ್ಲಿ ಕಾಣುತ್ತೇವೆ. ಶ್ರೀಪುರಂದರದಾಸರು ತಮ್ಮ ಒಂದು ದೇವರನಾಮದಲ್ಲಿ, **'ಕೇಳನೋ ಹರಿ ತಾಳನೋ । ತಾಳಮೇಳಗಳಿದ್ದು ಪ್ರೇಮವಿಲ್ಲದ ಗಾನ'** ಎಂದು ಹಾಡಿದ್ದಾರೆ. ಭಗವತ್ ಪ್ರೇಮವೇ ಭಕ್ತಿ. ಅದನ್ನೇ ನಾರದರು ತಮ್ಮ ಭಕ್ತಿ ಸೂತ್ರದಲ್ಲಿ **'ಸಾ ತ್ವಸ್ಮಿನ್ ಪರಮಪ್ರೇಮರೂಪಾ'** ಎಂದಿದ್ದಾರೆ. ಭಕ್ತಿ ಇಲ್ಲದ ಸಂಗೀತವನ್ನು ದೇವರು ಕೇಳಲಾರ, ಜನರಿಗೂ ಬೇಸರ ತಂದೀತು. ಭಕ್ತಿ-ಪ್ರೇಮಯುಕ್ತವಾದ ಸಂಗೀತ ಪರಮಾತ್ಮನಿಗೆ ಪ್ರಿಯವಾದುದು. ಹರಿಕಥೆಯಲ್ಲಿ ಆ ರೀತಿಯ ಸಂಗೀತವಿದೆ ಮತ್ತು ಕೀರ್ತನಕಾರರ ಅಪೇಕ್ಷೆಯೂ ಅದೇ ಇರುತ್ತದೆ. ಭಾವ, ಭಕ್ತಿ, ಪ್ರೇಮಗಳ ಸಮ್ಮಿಲನ ಕಥಾ-ಕೀರ್ತನೆಯ ಸಂಗೀತದಲ್ಲಿ ಕಾಣಸಿಗುತ್ತದೆ. ಅಲ್ಲಿ ಭಕ್ತಿ ಮತ್ತು ಸಂಗೀತದ ಸಮಾಗಮ ಸರಿಯಾಗಿ ಸಮ್ಮಿಳಿತವಾಗಿರುತ್ತದೆ.

ಹರಿಕಥೆಯಲ್ಲಿ ಶಾಸ್ತ್ರೀಯ ಸಂಗೀತದ ಜೊತೆಗೆ ಜಾನಪದ ಶೈಲಿಯ ಸಂಗೀತವೂ ಇರುತ್ತದೆ. ಅನುಭವ ಪದಗಳನ್ನು ಜಾನಪದ ಸಂಗೀತದಲ್ಲಿ ಹಾಡಿದರೆ, ಅದರಲ್ಲೂ ನಿರಾಕಾರ ಭಕ್ತಿಯ ಸಿಂಚನವಿರುತ್ತದೆ. ದೇವರನಾಮಗಳನ್ನು, ಮರಾಠಿ ಅಭಂಗಗಳನ್ನು, ಭಜನಗಳನ್ನು, ಭಕ್ತಿಪ್ರಧಾನ ಶಾಸ್ತ್ರೀಯ ರಚನೆಗಳನ್ನು ಹರಿಕಥೆಯಲ್ಲಿ ಹಾಡುತ್ತಾರೆ. ಚಲನಚಿತ್ರಗೀತೆಗಳನ್ನು ಹಾಡುವುದಿಲ್ಲ. ಏಕೆಂದರೆ ಆ ಗೀತೆಗಳನ್ನು ಹಾಡುವಾಗ ನಮ್ಮ ಕಣ್ಣ ಮುಂದೆ ನಟ-ನಟಿಯರ ಚಿತ್ರ ಬರುತ್ತದೆ. ಭಕ್ತಿಗೀತೆಗಳನ್ನು ಹಾಡುವಾಗ ನಮ್ಮ ಕಲ್ಪನೆಯ ರಾಮನನ್ನೋ, ಕೃಷ್ಣನನ್ನೋ ನಮ್ಮ ಮುಂದೆ ಚಿತ್ರಿಸುತ್ತೇವೆ. ಅದುವೇ ಕಥಾ-ಕೀರ್ತನೆಯ ಮೂಲಧಾತು. ಸಂಗೀತದ ಶ್ರುತಿಯಿಂದ ಶ್ರುತಿ(ವೇದ)ಯ ಸಹಾಯದಿಂದ ಭಗವಂತನ ಸ್ತುತಿ ಮತ್ತು ಗುಣಗಾನ ಮಾಡುವುದು ಹರಿಕಥೆಯಲ್ಲಿದೆ. ಅದಕ್ಕೆ ಭಕ್ತಿಯೇ ಆಧಾರಸ್ತಂಭ.

ಹರಿಕಥೆ ಶಬ್ದದ ಅರ್ಥವೇ ಪರಮಾತ್ಮನ ಕಥೆ, ಅವನ ಕೀರ್ತಿಯನ್ನು ಹಾಡುವುದು. ಅಲ್ಲಿ ಸಂಗೀತವಿದ್ದು ಅದು ಭಕ್ತಿಯುಕ್ತವಾಗಿದೆ. ಈ ಹರಿಕಥಾ ಪರಂಪರೆ ಸಂಗೀತ ಮತ್ತು ಭಕ್ತಿಗಳ ಸಮಾಗಮವಾಗಿದೆ. ಕರ್ನಾಟಕದಲ್ಲಿ ಹರಿದಾಸ ಪರಂಪರೆ ಹದಿಮೂರನೆಯ ಶತಮಾನದಿಂದ ಹಿಡಿದು ಇಂದಿನವರೆಗೆ ಅವಿರತವಾಗಿ ನಡೆದುಕೊಂಡು ಬಂದಿದೆ. ಇಂದು ಕೂಡ ಹರಿಕಥಾ ಕಲೆ ಜನಪ್ರಿಯವಾಗಿ ಮನ್ನಣೆ ಪಡೆದಿದೆ.

ಹರಿಕಥಾ ಶ್ರವಣ ಮಾಡೋ

ಹರಿಕಥಾ ಶ್ರವಣ ಮಾಡೋ, ಪಾಡೋ
ಹರಿಕಥಾ ಶ್ರವಣ ಮಾಡೋ ।। ಪ ।।

ಪಥಾ ವೈಕುಂಠಕಿದು ನೋಡೋ ।। ಅ.ಪ. ।।

ಸರಸಿಜನಾಭನ ಸರ್ವದಾ ಹೊಗಳುತ
ದುರಿತ ದೊರಕೆಡ್ಯಾಡೋ ।। ೧ ।।

ಜ್ಞಾನ ಭಕುತಿ ವೈರಾಗ್ಯವೀವ ನಮ್ಮ
ಆನಂದತೀರ್ಥರ ಪಾಡೋ ।। ೨ ।।

ಪರಮ ಪುರುಷ ಶ್ರೀ ಪುರಂದರ ವಿಠಲನ
ಚರಣಕಮಲದಲಿ ಕೂಡೋ ।। ೩ ।।

— ಪುರಂದರದಾಸರು